ಒದ್ದೆ ಬಟ್ಟೆಯಲ್ಲಿ ಒರಸಿ ಅಚ್ಚುಕಟ್ಟಾಗಿ ಇಡುತ್ತಿದ್ದಳು. ಇಂದು ಅದೇ ರುಚಿಯ ಅಡಿಗೆಯನ್ನು ಉಂಡು ಕಲ್ಯಾಣಿಗೆ ಊರಿಗೆ ಹೊರಡುವ ಆತುರ ಬಂದಿತು. ''ಬಾ, ಚಿಕ್ಕಿ ಸ್ವಲ್ಪ ಹೊತ್ತು ಹೊರಗೆ ಜಗಲಿ ಮೇಲೆ ಕೂರೋಣ, ಆಮೇಲೆ ಬಸ್ಸಿಗೆ ಹೊರಡುತ್ತೀನಿ'' ಎಂದು ಅವಸರಿಸಿದಳು.

ಹಿಂದಿನ ದಿನಗಳಲ್ಲಿ ಹೆಂಗಸರು ಜಗಲಿ ಮೇಲೆ ಕೂರುವ ಹಾಗಿರಲಿಲ್ಲ. ಇಂದು ಇಬ್ಬರೂ ನಿರಾತಂಕವಾಗಿ ಜಗಲಿ ಮೇಲೆ ಕುಳಿತಿದ್ದಾರೆ. ಈಗ ಏನೊ ನೆನಪಾಗಿ ಕಲ್ಯಾಣಿ, "ಚಿಕ್ಕಿ ನಾನು ಬಸ್ಸಿಳಿದು ಬರುವಾಗ ನೋಡಿದೆ. ಅಲ್ಲಲ್ಲಿ ಎಷ್ಟೊ ಮನೆಗಳು ಹಾಳು ಬಿದ್ದಂಗೆ ಆಗಿವೆ. ಹೆಂಚು ಕೈಯಾಡ್ಸಿಲ್ಲ, ಬಾಗಿಲಿಗೆ ಬೀಗ, ಜಗಲಿ ತುಂಬಾ ದೂಳು ಕಿವುಡಿ ಹಟ್ಟಿನಂತೂ ನೋಡಕ್ಕಾಗ್ಲಿಲ್ಲ. ಅವಳಿದ್ದಾಗ ಜಗಲಿ ಮೇಲೆ ಎಲೆ ಅಚ್ತಾ ಕೂತಿದ್ದವಳು ಓಗೋರು ಬರೋರನೆಲ್ಲಾ ಮಾತಾಡ್ಸವಳು. ಊರ್ಗೆ ಏನಾಗಿದೆ?'' ಎಂಬ ಪ್ರಶ್ನೆಗೆ ಉತ್ತರವಾಗಿ ಚಿಕ್ಕಿ ಹೇಳಿದ್ದು: "ಮಗಾ ಈಗ ಹಳ್ಳೀಲಿ ಏನೈತೆ? ಜನರನ್ನೂ ಅನ್ನೋ ಅಂಗಿಲ್ಲ. ಇಷ್ಟಗಲ ಹೊಲ, ಗದ್ದೇಲಿ ಏನು ಬೆಳೆದಾರು? ಬೆಳೆದದ್ದು ವರ್ಷಪೂರ್ತಿ ಜೀವನಕ್ಕೆ ಎಟಕ್ತದಾ? ಬೆಂಗಳೂರು ಪೇಟೆ ಕರೀತದೆ. ಒಂದಲ್ಲ ಒಂದು ಕೆಲಸ ಸಿಗ್ತದೆ. ಒಗ್ದೆ ಇನ್ನೇನು ಮಾಡ್ತಾರೆ ಇಲ್ಲಿ ಮನೆಗಳ ಗತಿ ನೀ ನೋಡ್ದಲ್ಲಾ ಅಂಗಾಯ್ತದೆ.''

ಇಷ್ಟರಲ್ಲಿ ರಸ್ತೆಯಲ್ಲಿ ಯಾರೊ ಮಾತಾಡ್ಕಂಡು ಬರ್‍ತಿದಾರೆ ಅನ್ನಿಸಿತು. ತಲೇಲಿ ಕನಕಾಂಬರ ಮುಡಿದು ದೊಡ್ಡ ಕುಂಕಮದ ಹೆಂಗಸು, ''ಯಾರೇನು ಕೊಟ್ಟದ್ದು? ಹೂವು, ಕುಂಕುಮ ಹುಟ್ಟಿದಾಗಿನಿಂದ ನಮ್ಮಪ್ಪನ ಮನೆಯಿಂದ ಬಂದದ್ದು'' ಎಂದು ಗೊಣಗುತ್ತ ಚಿಕ್ಕಿ ಮನೆ ಮುಂದೆ ಹಾದು ಹೋದರು. ಬೆರಗಾದ ಕಲ್ಯಾಣಿಯನ್ನು ಕುರಿತು ಚಿಕ್ಕಿ, ''ಅಯ್ಯೋ ಇವರು ಮೇಗಳ ಬೀದಿ ಸುಬ್ಬಲಕ್ಷಮ್ಮನೋರು. ಗಂಡ ಸತ್ತ ಮೇಲೆ ಅವರು ಹೂವು, ಕುಂಕ್ಮ ತೆಗಿಲಿಲ್ಲ, ದಿವ್ಸಾ ಇಂಗೆ ಒಂದಲ್ಲ ಒಂದು ತರ ಹೂವು ಮುಡ್ಕಂಡು, ಇಂಗೆ ಏನೇನೊ ಮಾತಾಡ್ಕಂಡು ಕೆರೆ ಅತ್ರ ಐತೆ ನೋಡು ದೇವಸ್ಥಾನ ಅಲ್ಲಿಗೋಗಿ ಒಸಿ ಹೊತ್ತು ಕೂತಿದ್ದು ಬರ್‍ತಾರೆ. ಯಾರನ್ನೂ ಕ್ಯಾರೆ ಅನ್ನಲ್ಲ'' ಎಂದು ತಿಳಿಸಿದಳು.

ಕಲ್ಯಾಣಿ ನೆನಸಿಕೊಂಡಳು. ಕೆಲವು ವರ್ಷಗಳ ಹಿಂದೆ ಚಿಕ್ಕಿಗೆ, ''ನೀನು ಯಾಕೆ? ಹೀಗೆ ಬೋಳು ಹಣೇಲಿ ಇದೀಯಾ? ಹಣೆಗೆ ಕುಂಕ್ಮಾನೊ ಸಾದೋ ಏನಾದರೂ ಇಟ್ಕೊ, ಗಾಜಿನ ಬಳೇನೂ ಹಾಕ್ಕೊ'' ಎಂದು ಒತ್ತಾಯಿಸಿದ್ದಳು. "ಚಿಕ್ಕಿ ಈ ಜನ್ಮಕ್ಕೆ ಇಷ್ಟೆ" ಎಂದು ಕಲ್ಯಾಣಿ ಮುಂದೆ ಮಾತಾಡದಂತೆ ಮೌನವಾಗಿಸಿದ್ದಳು. ಇಂದು ಪೇಟೆ, ಊರು ಊರುಗಳಲ್ಲಿ ಬೀಸುತ್ತಿರುವ ರೂಢಿಯಿಂದ ಬಿಡುಗಡೆಯಾದ ಹೊಸತನದ ಗಾಳಿ ಈ ಹಳ್ಳಿಗೂ ತಟ್ಟಿದಂತಿದೆ. ವಯಸ್ಸಾದ ಸುಬ್ಬಲಕ್ಷ್ಮಮ್ಮ ಈ ನೂತನ ಗಾಳಿಯ ಹರಿಕಾರರಾಗಿ ಕಾಣುತ್ತಿದ್ದಾರೆ ಎಂದೆನಿಸಿತು ಕಲ್ಯಾಣಿಗೆ.

**ಪದ್ಮಾ ಶ್ರೀರಾಮ**

ಹುಟ್ಟಿದ ಊರು ಹಾಸನ, ನೆಲೆಸಿರುವುದು ಮೈಸೂರು. ಹಾಗಾಗಿ ಮಲೆನಾಡು ಮತ್ತು ಬಯಲುಸೀಮೆಗಳ ಬಗ್ಗೆ ಸಮಾನ ಪ್ರೀತಿ. ಸಸ್ಯಶಾಸ್ತ್ರವನ್ನು ಮುಖ್ಯವಿಷಯವಾಗಿ ಓದಿದ್ದು. ಸಸ್ಯಗಳನ್ನು ಕುರಿತು ಬರೆಯುವುದು ಇಷ್ಟದ ಕೆಲಸ. 'ಮಯೂರ'ದಲ್ಲಿ ಸಸ್ಯಗಳ ಬಗ್ಗೆ 'ಗಿಡಗಂಟೆಯಾ ಕೊರಳು' ಶೀರ್ಷಿಕೆಯ ಅಡಿಯಲ್ಲಿ ಇಪ್ಪತ್ತು ತಿಂಗಳು ಲೇಖನಗಳು ಪ್ರಕಟವಾಗಿವೆ. ಈ ಬರಹಗಳು 'ಪುಸ್ತಕ ಪ್ರಕಾಶನ'ದಿಂದ ಪುಸ್ತಕ ರೂಪದಲ್ಲಿ ಪ್ರಕಾಶನಗೊಂಡಿವೆ. ಲಂಕೇಶ್ ಪತ್ರಿಕೆಯಲ್ಲಿ ಅನೇಕ ಪ್ರಬಂಧ, ಕತೆಗಳು ಪ್ರಕಟವಾಗಿವೆ.